

ಅರುಣ ಪಿ. ಭಟ್ಟ

## ವಾರಭವಿಷ್ಯ: 22.01.2026ರಿಂದ 28.01.2026ರವರೆಗೆ




ಭೂಮಿ ವ್ಯವಹಾರಗಳಲ್ಲಿ ಒಳ್ಳೆ ಲಾಭ ಗಳಿಸುವ ಅವಕಾಶ ಇದೆ. ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆ ಹೆಚ್ಚಿದೆ.ಆರೋಗ್ಯ ವಿಚಾರದಲ್ಲಿ ಹೆಚ್ಚಿನ ಆತಂಕ ಪಡುವ ಅಗತ್ಯ ಇಲ್ಲ. ವಿದ್ಯಾರ್ಥಿಗಳು ಹೊಸಬರ ಸ್ನೇಹ ಮಾಡುವಾಗ ಎಚ್ಚರಿಕೆಯಿಂದ ಇರಬೇಕು. ಶುಭದಿನ: 28. ಹನುಮಾನ್ ಚಾಲೀಸ್ ಓದಿರಿ.




ನೀವು ನಂಬಿದ ವಿಚಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಬಹಳ ಶ್ರಮ ಪಡುತ್ತೀರಿ. ಸಾಲ ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಜವಾಬ್ದಾರಿ ಬಂದರೆ ಎಚ್ಚರಿಕೆಯಿಂದ ನಿರ್ವಹಿಸಿ. ವಾಹನ ಚಾಲನೆ ಮಾಡುವಾಗ ಎಚ್ಚರ. ದಂಡ ಬೀಳಬಹುದು. ಹತ್ತಿರದ ಸ್ಥಳವೊಂದಕ್ಕೆ ಪ್ರವಾಸ ಕೈಗೊಳ್ಳಲಿದ್ದೀರಿ. ಶುಭದಿನ: 23. ಗಣೇಶ ಪಂಚರತ್ನ ಸ್ತೋತ್ರ ಪಠಣ ಮಾಡಿರಿ.




ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಕೋರ್ಟ್ ಪ್ರಕರಣಗಳ ಕಡೆ ಹೆಚ್ಚಿನ ಗಮನ ನೀಡಬೇಕು. ಸಂಗಾತಿ ಮಕ್ಕಳಿಗೆ ಬೆಲೆ ಬಾಳುವ ಉಡುಗೊರೆ ನೀಡುವ ಬಗ್ಗೆ ಆಲೋಚನೆ ಮಾಡುತ್ತೀರಿ. ಶುಭದಿನ: 26. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ನಿಮ್ಮ ಆದಾಯದಲ್ಲಿ ಹೆಚ್ಚಳ ಕಾಣಿಸಿಕೊಳ್ಳಲಿದೆ. ನಿಮ್ಮ ಶ್ರಮಕ್ಕೆ ಪ್ರತಿಫಲ ದೊರೆಯಲು ಆರಂಭವಾಗುತ್ತದೆ. ನಿಮ್ಮ ವರ್ಚಸ್ಸು ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಈ ವಾರ ಯಶಸ್ಸು ದೊರೆಯುವ ಅವಕಾಶಗಳು ಹೆಚ್ಚಿದೆ. ಸರಿಯಾದ ದಾರಿಯಲ್ಲಿ ಸಿದ್ಧತೆ ನಡೆಸುವುದರಿಂದ ಯಶಸ್ಸು ಪಡೆಯುವ ಅವಕಾಶ ಹೆಚ್ಚಾಗಿರುತ್ತದೆ. ವ್ಯವಹಾರದಲ್ಲಿ ಬಿಕ್ಕಟ್ಟು ಎದುರಾಗಬಹುದು. ಶುಭದಿನ: 24. ವಿಷ್ಣುಸಹಸ್ರನಾಮ ಓದಿರಿ.




ನಿಮ್ಮ ವೈಯಕ್ತಿಕ ವರ್ಚಸ್ಸಿನಿಂದ ಇತರರಿಗೆ ಸಹಾಯ ಮಾಡಲು ಮುಂದಾಗುತ್ತೀರಿ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರೆ ಅದರ ಶ್ರಮದ ಫಲವನ್ನು ಪಡೆಯಲು ಇದು ಸರಿಯಾದ ಕಾಲ. ಪೋಷಕರಿಗೆ ಮಕ್ಕಳ ವರ್ತನೆ, ಬೆಳವಣಿಗೆ ಹಾಗೂ ನಡವಳಿಕೆಯಿಂದ ಸಂತೋಷ ಉಂಟಾಗುತ್ತದೆ. ಆರೋಗ್ಯದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಶುಭದಿನ: 25. ಶ್ರೀಗೋವಿಂದಾಷ್ಟಕಮ್ ಪಠಿಸಿರಿ.




ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ವಾರದ ಮೊದಲಾರ್ಧದ ನಂತರ ಆರ್ಥಿಕವಾಗಿ ಬಲ ಬರುತ್ತದೆ. ಉಳಿತಾಯ ಮಾಡುವ ಕಡೆಗೆ ಮನಸ್ಸು ಹರಿಯುತ್ತದೆ. ಮಕ್ಕಳ ಪ್ರಗತಿಯಿಂದ ಹೆಮ್ಮೆ ಸಂತೋಷ ಉಂಟಾಗುತ್ತದೆ. ಬಾಕಿ ಹಣ ಬರಬೇಕಾಗಿದ್ದಲ್ಲಿ ಬರುವ ಅವಕಾಶ ಹೆಚ್ಚಿರುತ್ತದೆ. ಶುಭದಿನ: 27. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗಲಿದೆ. ಹಣ ಹೂಡಿಕೆಯಲ್ಲಿ ಉತ್ತಮ ಲಾಭ ಆಗಲಿದೆ. ಉದ್ಯೋಗದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರುಪೇರಾಗುತ್ತದೆ. ಸೋದರ ಸೋದರಿಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಸಂತಾನ ನಿರೀಕ್ಷೆಯಲ್ಲಿ ಇರುವ ದಂಪತಿಗೆ ಶುಭ ಸುದ್ದಿ ಕೇಳುವ ಯೋಗವಿದೆ. ಶುಭದಿನ: 26 ದೇವಿ ಆರಾಧನೆ, ಸೌಂದರ್ಯಲಹರಿ ಪಠಿಸಿರಿ.




ಹೊಸದಾಗಿ ಮನೆ ಕಟ್ಟಬೇಕು ಎಂದು ಆಲೋಚನೆ ಮಾಡುತ್ತಿರುವವರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸೂಕ್ತ ಸಮಯ. ನೌಕರಸ್ಥರಿಗೆ ಮೇಲಧಿಕಾರಿಗಳ ಜತೆಗೆ ಉತ್ತಮ ಸಂಬಂಧ ಇರುತ್ತದೆ. ಸಂಗಾತಿ ಜತೆಗೆ ಪ್ರಮುಖವಾದ ವಿಚಾರಗಳನ್ನು ಚರ್ಚೆ ನಡೆಸಲಿದ್ದೀರಿ. ವಾರದ ಅಂತ್ಯಕ್ಕೆ ಸಕಾರಾತ್ಮಕ ಬೆಳವಣಿಗೆ ಕಾಣುತ್ತೀರಿ. ಶುಭದಿನ: 27. ಶಿವಪೂಜೆ, ಶಿವಪಂಚಾಕ್ಷರ ಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಸ್ಥರಿಗೆ ಸಮಸ್ಯೆಗಳು ಎದುರಾಗುವ ಸಂಭವ. ವೈವಾಹಿಕ ಜೀವನ ಚೆನ್ನಾಗಿರುತ್ತದೆ. ಸಂಗಾತಿ ಜತೆಗೆ ಸುಮಧುರವಾದ ಕ್ಷಣಗಳನ್ನು ಅನುಭವಿಸಲಿದ್ದೀರಿ. ಭೂಮಿ ಖರೀದಿಗೆ ಒಳ್ಳೆಯ ಸಮಯ. ಮನೆಯಲ್ಲಿ ಶುಭ ಕಾರ್ಯ ನಡೆಯುವ ಸಾಧ್ಯತೆ ಇದೆ. ಶುಭದಿನ: 28. ದೇವ್ಯಪರಾಧಕ್ಷಮಾಪಣ ಸ್ತೋತ್ರ ಪಠಿಸಿರಿ.




ಉತ್ತಮ ಹೆಸರು ಮಾಡಲು ಅದ್ಭುತವಾದ ಅವಕಾಶಗಳು ದೊರೆಯುತ್ತವೆ. ನಿಮ್ಮ ಜನಪ್ರಿಯತೆ ಕೂಡ ಹೆಚ್ಚಾಗಲಿದೆ. ವಿದ್ಯಾರ್ಥಿಗಳು ಅಂದುಕೊಂಡ ಗುರಿಯನ್ನು ತಲುಪಲಿದ್ದೀರಿ. ಕೋರ್ಟ್ ವ್ಯಾಜ್ಯಗಳಿಗೆ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯಾಪಾರ ಮಾಡುವವರಿಗೆ ಮಾರಾಟದ ಗುರಿ ತಲುಪುವಲ್ಲಿ ಹೆಚ್ಚು ಶ್ರಮವೇನೂ ಆಗುವುದಿಲ್ಲ. ಶುಭದಿನ: 26. ಸಂಕಷ್ಟಹರ ಮಹಾಗಣಪತಿ ಪೂಜೆ ಮಾಡಿರಿ.




ಕೌಟುಂಬಿಕ ವಿಚಾರಗಳಲ್ಲಿ ಪ್ರಗತಿಯನ್ನು ಕಾಣಲಿದ್ದೀರಿ. ಬಂಡವಾಳ ಹೂಡಿಕೆಗೆ ಹಲವು ಅವಕಾಶಗಳನ್ನು ಪರಿಶೀಲಿಸಲಿದ್ದೀರಿ. ಮದುವೆ ಸಂಬಂಧಗಳನ್ನು ಹುಡುಕುತ್ತಿದ್ದಲ್ಲಿ, ಅದರಲ್ಲಿ ಯಶಸ್ಸು ಕಾಣುವ ಅವಕಾಶ ಹೆಚ್ಚಾಗಿದೆ. ಇಂಥದ್ದೇ ವಿಚಾರಗಳಿಗೆ ಸಂಬಂಧಿಕರು ನಿಮ್ಮ ಸಹಾಯ ಕೇಳಿಕೊಂಡು ಬರಲಿದ್ದಾರೆ. ಶುಭದಿನ: 25. ಶ್ರೀ ಲಕ್ಷ್ಮೀ ನರಸಿಂಹ ಪಂಚರತ್ನ ಸ್ತೋತ್ರ ಪಠಿಸಿರಿ.




ವಾರ ಪೂರ್ತಿ ಕೆಲಸದಲ್ಲೇ ಮಗ್ನರಾಗುವಿರಿ. ಅನಾರೋಗ್ಯ ಉಂಟಾಗುವ ಸಂಭವವಿದೆ. ಮನೆಯಲ್ಲಿ ಶುಭ ಕಾರ್ಯವೊಂದನ್ನು ಆಯೋಜಿಸುವಿರಿ. ಉದ್ಯೋಗಿಗಳಿಗೆ ನೀವು ಪಟ್ಟ ಶ್ರಮಕ್ಕೆ ಮೇಲಧಿಕಾರಿಗಳಿಂದ ಮೆಚ್ಚುಗೆ ದೊರೆಯುತ್ತದೆ. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಆದಾಯದಲ್ಲಿ ಹೆಚ್ಚಳ ಆಗಲಿದೆ. ಶುಭದಿನ: 24. ಲಿಂಗಾಷ್ಟಕ ಪಠಿಸಿರಿ.